ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಬಂದಿದೆ.

ಆ) ರಾಜ್ಯದಲ್ಲಿ ನಡೆಯುತ್ತಿರುವ ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಸ್ಥಳೀಯವಾಗಿ ಲಭ್ಯವಿರುವ ಪ್ರೌಢಶಾಲೆಗಳ ಶೌಚಾಲಯ ಮತ್ತು ಇತರೆ ವ್ಯವಸ್ಥೆಯನ್ನೇ ಉಪಯೋಗಿಸಿಕೊಂಡು ಕಾರ್ಯನಿರ್ವಹಿಸುತ್ತಿದೆ. ಈಗಾಗಲೇ ನಬಾರ್ಡ್ ಸಹಯೋಗದ ಆರ್‌ಐಡಿಎಫ್ ಯೋಜನೆಯಡಿ ಹಾಗೂ ಸರ್ಕಾರದ ಬಂಡವಾಳ ವೆಚ್ಚದ ಯೋಜನೆಯಡಿ ಶೌಚಾಲಯ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಅಲ್ಲದೆ ಈ ಆರ್ಥಿಕ ವರ್ಷದಲ್ಲಿ ಆರ್‌ಐಡಿಎಫ್–19ರ ಯೋಜನೆಯಡಿ 147 ಹಾಗೂ ಆರ್‌ಐಡಿಎಫ್–20ರ ಯೋಜನೆಯಡಿ 149 ಕಾಲೇಜುಗಳಿಗೆ ಮತ್ತು ಸರ್ಕಾರದ ಬಂಡವಾಳ ವೆಚ್ಚದ ಯೋಜನೆಯಡಿ 65 ಕಾಲೇಜುಗಳಿಗೆ ಶೌಚಾಲಯವನ್ನು ನಿರ್ಮಿಸಲು ಅನುಮೋದನೆ ದೊರೆತಿದೆ.

ಇ) ರಾಜ್ಯ ವಲಯದಲ್ಲಿ ಅನುದಾನದ ಲಭ್ಯತೆ ಆಧಾರದ ಮೇಲೆ ಹಂತ ಹಂತವಾಗಿ ಕ್ರಮ ವಹಿಸಲಾಗುವುದು.

ಅನವಟ್ಟಿ ಪದವಿ ಪೂರ್ವ ಕಾಲೇಜಿನಲ್ಲಿ ವಿಜ್ಞಾನ ವಿಭಾಗ

1398(894); ಶ್ರೀ ಮಧು ಬಂಗಾರಪ್ಪ ಎಸ್. (ಸೊರಬ)

ಅ) ಸೊರಬ ತಾಲ್ಲೂಕಿನ ಅನವಟ್ಟಿಯಲ್ಲಿರುವ ಪದವಿ ಪೂರ್ವ ಕಾಲೇಜಿಗೆ ವಿಜ್ಞಾನ ವಿಭಾಗ ಮಂಜೂರಾಗಿದ್ದು, ಅದಕ್ಕೆ ಪೂರಕವಾದ ಪ್ರಯೋಗಾಲಯ ಇಲ್ಲದಿರುವುದು ಸರ್ಕಾದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಪ್ರಯೋಗಾಲಯವನ್ನು ಮಂಜೂರು ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆಯೇ;

ಇ) ಹಾಗಿದ್ದಲ್ಲಿ, ಯಾವ ಅವಧಿಯೊಳಗೆ ಪ್ರಯೋಗಾಲಯ ಮಂಜೂರು ಮಾಡಲಾಗುವುದು (ಮಾಹಿತಿ ನೀಡುವುದು)?

ಶ್ರೀ ಕಿಮ್ಮನೆ ರತ್ನಾಕರ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಬಂದಿದೆ.

ಆ) ಹೌದು.

ಇ) ಅನುದಾನದ ಲಭ್ಯತೆ ಆಧಾರ ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.

ಶಾಲೆಗಳಲ್ಲಿ ಶಿಕ್ಷಕರ ಕೊರತೆ

1399(895); ಶ್ರೀ ಮಧುಬಂಗಾರಪ್ಪ ಎಸ್.

ಅ) ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಶಿಕ್ಷಕರ ಕೊರತೆಯಿರುವುದರಿಂದ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುತ್ತಿದ್ದು, ಅನುದಾನಿತ ಶಾಲೆಗಳಲ್ಲೂ ಸಹ ಶಿಕ್ಷಕರ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಅನುದಾನಿತ ಶಾಲೆಗಳಿಗೆ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವ ಯೋಜನೆ ಸರ್ಕಾರದ ಗಮನದಲ್ಲಿದೆಯೇ;

ಇ) ಎಷ್ಟು ಶಿಕ್ಷಕರನ್ನು ಯಾವಾಗ ನೇಮಕ ಮಾಡಿಕೊಳ್ಳಲಾಗುವುದು (ಸಂಪೂರ್ಣ ವಿವರ ನೀಡುವುದು)?

ಶ್ರೀ ಕಿಮ್ಮನೆ ರತ್ನಾಕರ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಬಂದಿರುತ್ತದೆ.

ಆ) ಅನುದಾನಿತ ಶಾಲೆಗಳಲ್ಲಿ ಶಿಕ್ಷಕರ ಅಗತ್ಯತೆಗೆ ಅನುಗುಣವಾಗಿ ಶಾಲಾ ಆಡಳಿತ ಮಂಡಳಿಯು ಶಿಕ್ಷಕರನ್ನು ನೇಮಕ ಮಾಡಿಕೊಳ್ಳುತ್ತದೆ.

ಇ) ಉದ್ಭವಿಸುವುದಿಲ್ಲ.